ನೋಟಿಫಿಕೇಷನ್.

ತಾರೀಖು 3ನೆ ಅಕ್ಟೋಬರ್ 1907.

1900ನೆ ಇಸವಿಯ XIನೆ ನಂಬರ ಮೈಸೂರು ಕೀಮೆಯ ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಇಸ್ತಿಹಾರ್ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕು ಬಂದಿವುಳ್ಳ ಪ್ರದೇಶವು 1907ನೆ ಇಸವಿ ನವೆಂಬರ್ 1ನೆ ತಾರೀಖು ಲಾಗಾಯಿತು ಸದರಿ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು ಸ್ಟೇಟ್ ಫಾರೆಸ್ಟಾಗಿರತಕ್ಕದ್ದೆಂದು ವಿಧಿಸಲ್ಪಟ್ಟಿರುತ್ತ.

ಷೆಡ್ಯೂಲ್.

ತಿಸ್ಸುಕು	ತಾಲ್ಲೂಕು ಹೆಸರು ಮತ್ತು ಗ್ರಾಮಗಳ ಸಂಖ್ಯೆ.	ಅಂದಾಜು ವಿಸ್ತೀರ್ಣ.	ಪ್ರದೇಶದ ಹೆಸರು.
ಕೋಲಾರ.	ಬಾಂಗಿಸಿಪ್ಪೆ. 92 ಚದರ ಮೈಲಿಗಳು.		ಕಾವನಸಂದ್ರ ಬ್ಲಾಕ್ 6.

ಚತುರ್ಗಡಿ.

ಉತ್ತರಕ್ಕೆ.—ಫಾರೆಸ್ಟ್ ಸರ್ವೆಯ ಲೈನ್ ಮಿಟ್ಟಪಲ್ಲಿ ಗ್ರಾಮದ ಸರ್ವೆ 5ನೆ ನಂಬರಿನ ವಾಯವ್ಯ ಮೂಲೆಗೆ ಈಶಾನ್ಯ ದಿಕ್ಕಿನಲ್ಲಿ ಸುಮಾರು 1¼ ಫರ್ಲಾಂಗು ದೂರದಲ್ಲಿ ಸರ್ವೆ 6ನೆ ನಂಬರು ವಾಯವ್ಯ ಎಲ್ಲೆಯಿಂದ ಹೊರಟು ಈಶಾನ್ಯ ದಿಕ್ಕಿಗೆ ಬೊಂಪಲ್ಲಿ ಮತ್ತು ಮಿಟ್ಟಪಲ್ಲಿ ಗ್ರಾಮಗಳ ಮಧ್ಯದ ಸರಹದ್ದಿನ ಮೇಲ್ಕ್ಕಡೆ ಹರಿದು ಈ ಎರಡು ಗ್ರಾಮಗಳು ಮತ್ತು ನಡಿಂಪಲ್ಲಿ ಗ್ರಾಮದ ಕೋಡು ಬಾಂದಿಗೆ ಸೇರುತ್ತದೆ. ಅಲ್ಲಿಂದ ಆಗ್ನೇಯ ದಿಕ್ಕಿಗೆ ನಡಿಂಪಲ್ಲಿಯ 30ನೆ ನಂಬರಿನ ಮಧ್ಯೆ ಹರಿದು ಸದರಿ ನಂಬರಿನ ಪೂರ್ವ ಎಲ್ಲೆಯಲ್ಲಿ ಸರ್ವೆ 29ನೆ ನಂಬರಿನ ಈಶಾನ್ಯ ಮೂಲೆಯಿಂದ ಸುಮಾರು ಬಂದು ಫರ್ಲಾಂಗು ದಕ್ಷಿಣಕ್ಕೆ ಹೋಗುತ್ತದೆ. ಅಲ್ಲಿಂದ ನಡಿಂಪಲ್ಲಿ ಮತ್ತು ಇನಾಂ ಬೋಡೇನಹಳ್ಳಿ ಗ್ರಾಮಗಳ ಮಧ್ಯದ ಸರಹದ್ದಿನ ಮೇಲೆ ಹರಿದು ಸದರಿ ಎರಡು ಗ್ರಾಮಗಳ ಮತ್ತು ಬುವನಹಳ್ಳಿ ಕೋಡು ಬಾಂದಿಗೆ ಸೇರಿ ಅಲ್ಲಿಂದ ಪೂರ್ವ ದಿಕ್ಕಿಗೆ ಬುವನಹಳ್ಳಿ ಇನಾಂ ಬೋಡೇನಹಳ್ಳಿ ಮತ್ತು ವರದಾಪುರ ಗ್ರಾಮಗಳ ಮಧ್ಯದ ಸರಹದ್ದಿನ ಮೇಲೆ ಹೊರಟು ಸದರಿ ವರದಾಪುರ, ಬುವನಹಳ್ಳಿ ಮತ್ತು ಬತ್ತಲಹಳ್ಳಿ ಗ್ರಾಮಗಳ ಕೋಡು ಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ.—ಅಲ್ಲಿಂದ ನೈರುತ್ಯ ದಿಕ್ಕಿಗೆ ಬುವನಹಳ್ಳಿ ಮತ್ತು ಬತ್ತಲಹಳ್ಳಿ ಗ್ರಾಮಗಳ ಮಧ್ಯದ ಸರಹದ್ದಿನ ಮೇಲೆ ಹೊರಟು ಸದರಿ ಎರಡು ಗ್ರಾಮಗಳ ಮತ್ತು ಗುಂಡಾರ್ಲಹಳ್ಳಿಯ ಕೋಡು ಬಾಂದು ಸೇರುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಪಶ್ಚಿಮದಿಕ್ಕಿಗೆ ಬುವನಹಳ್ಳಿಯ ಸರ್ವೆ 64ನೆ ನಂಬರಿನ ಮಧ್ಯೆ ಸುಮಾರು 5 ಫರ್ಲಾಂಗು ದೂರ ಹರಿದು ಚಿನ್ನಕಾಮನಹಳ್ಳಿ ಸರ್ವೆ 24 ಮತ್ತು ಬುವನಹಳ್ಳಿ ಸರ್ವೆ 64ನೆ ನಂಬರುಗಳ ಸರಹದ್ದು ಬಾಂದುಗಳು ಸೇರಿ ಅಲ್ಲಿಂದ ನೈರುತ್ಯ ದಿಕ್ಕಿಗೆ ಚಿನ್ನಕಾಮನಹಳ್ಳಿ ಪೂರ್ವ ಎಲ್ಲೆಯ ಮೇಲೆ ಹರಿದು ಸದರಿ ಗ್ರಾಮದ ಆಗ್ನೇಯ ಮೂಲೆಯಿಂದ ಸುಮಾರು 2¼ ಫರ್ಲಾಂಗು ದೂರದಲ್ಲಿ ಉತ್ತರಕ್ಕೆ ಹರಿದು ವಾಯವ್ಯ ದಿಕ್ಕಿಗೆ ತಿರಿಗಿ ಚಿನ್ನಕಾಮನಹಳ್ಳಿಯ 24ನೆ ನಂಬರು ಮಧ್ಯೆ ಸುಮಾರು 2½ ಫರ್ಲಾಂಗು ಹರಿದು ಸದರಿ ಗ್ರಾಮದ ಸರ್ವೆ 28ನೆ ನಂಬರಿನ (ಕೆರೆಯ) ಈಶಾನ್ಯ ಮೂಲೆ ಬಾಂದಿಗೆ ಸೇರುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಉತ್ತರಕ್ಕೆ ಚಿನ್ನಕಾಮನಹಳ್ಳಿ ಸರ್ವೆ 24ನೆ ನಂಬರಿನ ಮಧ್ಯದಲ್ಲಿ ಸುಮಾರು 5 ಫರ್ಲಾಂಗು ದೂರ ಹರಿದು ಸರ್ವೆ 19ನೆ ನಂಬರಿನ (ಕೆರೆ) ಪೂರ್ವ ಮೂಲೆ ಸೇರಿ ಅದೇ ನಂಬರಿನ ಈಶಾನ್ಯ ಎಲ್ಲೆಯ ಮೇಲೆ ವಾಯವ್ಯ ದಿಕ್ಕಿನಲ್ಲಿ ಹೊರಟು ಚಿನ್ನಕಾಮನಹಳ್ಳಿ-ನಡಿಂಪಲ್ಲಿ ಮತ್ತು ಮಿಟ್ಟಪಲ್ಲಿ ಗ್ರಾಮಗಳ ಕೋಡು ಬಾಂದಿಗೆ ಸೇರಿ ಅಲ್ಲಿಂದ ಮಿಟ್ಟಪಲ್ಲಿ ಗ್ರಾಮದ ಸರ್ವೆ 6ನೆ ನಂಬರ ಮಧ್ಯದಲ್ಲಿ ವಾಯವ್ಯ ದಿಕ್ಕಿಗೆ ಸುಮಾರು 4½ ಫರ್ಲಾಂಗು ದೂರ ಹರಿದು ಪುರುವಾದ ಸ್ಥಳವನ್ನು ಸೇರುತ್ತದೆ.

ಷರಾ—(A).

ಇದರಡಿ ನಮೂದಿಸಿರುವ ದಾರಿಯ ಹಕ್ಕುಗಳನ್ನ ಸದಾ ಕಾಲವು ಅನುಭವಿಸಬಹುದು.

(1) 10 ಗಜ ಅಗಲದ ಮೆತ್ತ 11 ಮೈಲಿ ಫಾಸಲೆ ಉಳ್ಳ ಬಂಡಿ ಜಾಡು ನಡಿಂಪಲ್ಲಿಯಿಂದ ಬುವನಹಳ್ಳಿಗೆ ಹೋಗತಕ್ಕದ್ದು. ಈ ಜಾಡು ನಡಿಂಪಲ್ಲಿ-ಮಿಟ್ಟಪಲ್ಲಿ ಮತ್ತು ಬೊಂಪಲ್ಲಿ ಈ ಗ್ರಾಮಗಳ ಕೋಡು ಬಾಂದಿನ ಆಗ್ನೇಯ ದಿಕ್ಕಿನಲ್ಲಿ ಸುಮಾರು 30 ಸರಪಣಿ ದೂರದಲ್ಲಿ ಉತ್ತರ ಗಡಿಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಣ ದಿಕ್ಕಿಗೆ ಸುಮಾರು 88 ಸರಪಣಿ ದೂರ ಹರಿದು ಚಿನ್ನಕಾಮನಹಳ್ಳಿಯ ಸರ್ವೆ 24ನೆ ನಂಬರಿನ ಪೂರ್ವ ಎಲ್ಲೆಯಲ್ಲಿ ಸದರಿ ನಂಬರಿನ ಆಗ್ನೇಯ ಮೂಲೆಯಿಂದ ಸುಮಾರು 33 ಸರಪಣಿ ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ಬುವನಹಳ್ಳಿಯಿಂದ ರಾಮನಿಜಿಕರುವು ಮಾರ್ಗವಾಗಿ ಇನಾಂ ಬೋಡೇನಹಳ್ಳಿಗೆ ಹೋಗತಕ್ಕ ಜನಗಳು ಮತ್ತು ದನಗಳು ತಿರಗತಕ್ಕ ದಾರಿ. ಈ ದಾರಿಯು ಬುವನಹಳ್ಳಿ-ಗುಂಡಾರ್ಲಹಳ್ಳಿ ಮತ್ತು ಬತ್ತಲಹಳ್ಳಿಗಳ ಕೋಡು ಬಾಂದಿನಿಂದ ಪಶ್ಚಿಮಕ್ಕೆ ಸುಮಾರು 20 ಸರಪಣಿಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಉತ್ತರ ದಿಕ್ಕಿಗೆ ರಾಮನಜೆರುವು ವರೆವಿಗೆ ಹರಿದು ಅಲ್ಲಿಂದ ಈಶಾನ್ಯ ದಿಕ್ಕಿಗೆ ತಿರಿಗಿ ಬೋಡೇನಹಳ್ಳಿ-ವರದಾಪುರ ಮತ್ತು ಬುವ

ನಹಳ್ಳಿ ಗ್ರಾಮಗಳ ಕೋಡು ಬಾಂದುಗಳ ಸವಿಾಪದಲ್ಲಿ ಫಾರೆಸ್ಟಿನಿಂದ ವಾರಾಗುತ್ತದೆ. ಈ ದಾರಿಯು ಸ್ಟೇಟ್ ಫಾರೆಸ್ಟಿನಲ್ಲಿ 10 ಗಜ ಅಗಲವಾಗಿಯೂ 4½ ಫರ್ಲಾಂಗು ದೂರಕ್ಕೂ ಹೋಗುತ್ತದೆ.

(B)

(3) ಮೇಲ್ಕಂಡ ರಾವುನ ಚರುವಿನ ನೀರನ್ನು ಈ ಕೆಳಗೆ ವಿವರಿಸಿರುವ ಗ್ರಾಮಸ್ಥರು ಮತ್ತು ಧನಗಳು ಸದಾ ಕಾಲವು ನಿಯಾಮಕವಾದ ದಾರಿ ಮುಖಾಂತ್ರ ಉಪಯೋಗಿಸಿಕೊಳ್ಳಬಹುದು.

ಬುವನಹಳ್ಳಿ—ಈ ಗ್ರಾಮದ ಜನಗಳು ಮತ್ತು ಧನಗಳು 2ನೆ ನಂಬರಿನ ಕಾಲುದಾರಿ ಮಾರ್ಗವಾಗಿ ಹೋಗಿ ಬರಬಹುದು.

ನಡಿಂಪಲ್ಲಿ—ಈ ಗ್ರಾಮದ ಜನಗಳು ಮತ್ತು ಧನಗಳು ಫಾರೆಸ್ಟ್ ಉತ್ತರ ಸರಹದ್ದಿನ ಲೈನು ಇನಾಂ ಬೋಡೇನಹಳ್ಳಿ ಎಲ್ಲೆ ಮೇಲೆ ಹೋಗಿ ಬರತಕ್ಕದ್ದು.

ಬಿ. ವೆಂಕೋಬರಾವ್,
ಫಾರ್ ಡೆಪ್ಯೂಟಿ ಕವಿಾಷನರ್, ಕೋಲಾರ ಡಿಸ್ಟ್ರಿಕ್ಟು.

ವಿದ್ಯಾಭ್ಯಾಸದ ಇಲಾಖೆ.

ನೋಟಿಫಿಕೇರ್ಷ—ಡಿ. ನಂಬರು 15.

ತಾರೀಖು 7ನೆ ಅಕ್ಟೋಬರು ಸ 1907ನೆ ಇಸವಿ.

ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದ ಸ 1907ನೆ ಇಸವಿ ಅಕ್ಟೋಬರು 4ನೆ ತಾರೀಖು 3116—32—Edn. 231-06—4ನೆ ನಂಬರು ಹುಕುಮನ್ನನುಸರಿಸಿ ಇದರಿಂದ ತಿಳಿಯಪಡಿಸುವುದೇನಂದರೆ :—ಚಾಲ್ತಿ ಇಸವಿ ಅಕ್ಟೋಬರು 1ನೆ ತಾರೀಖು ಮೊದಲ್ಗೊಂಡು ತಾಲ್ಲೂಕು ಬ್ರಾಂಚು ಮತ್ತು ಹೋಬಳಿ ಸ್ಕೂಲ್‌ಗಳಿಂದು ಕರೆಯಲ್ಪಡುವ ಸರ್ಕಾರದ ಪಾಠಶಾಲೆಗಳ 2ನೆಯ ಮತ್ತು 3ನೆಯ ಕ್ಲಾಸುಗಳಲ್ಲಿ ಫೀಯನ್ನು ಮೋಕೂಫ್ ಮಾಡಿರುತ್ತೆ. ಈ ನೋಟಿಫಿಕೇರ್ಷ ತಲ ಪುವುದಕ್ಕೆ ಮುಂಚೆ ಈ ಕ್ಲಾಸುಗಳಲ್ಲಿ ಫೀಯನ್ನು ವಸೂಲ್ಮಾಡಿದ್ದಪಕ್ಷದಲ್ಲಿ ಸದರಿ ಫೀಯನ್ನು ಹೆಡ್ಮಾಸ್ಟರು ಆಯಾ ವಿದ್ಯಾರ್ಥಿಗಳಿಗೆ ವಾಪಸು ಮಾಡತಕ್ಕದ್ದು.

ಹೆಚ್. ಜೆ. ಭಾಭಾ,
ಡೈರೆಕ್ಟರ್ ಜನರಲ್ ಆಫ್ ಎಡ್ಯುಕೇರ್ಷ ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

1907ನೆ ಇಸವಿ ಆಗಸ್ಟು 15ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟು ಫಂಡು ಬೋರ್ಡ್ ಮೀಟಿಂಗು ಪ್ರೊಸೀಡಿಂಗ್ಸ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಹಾಜರು.

ಟ್ರೆಜರಿ ಆಫೀಸರು ಮತ್ತು ವೈಸು ಪ್ರೆಸಿಡೆಂಟರು, ಮೆ॥ ಟಿ. ರಾಯಲು ಚೆಟ್ಟರವರು, ಪ್ರೆಸಿಡೆಂಟರವರ ಸ್ಥಾನವನ್ನು ನಿರ್ವಹಿಸಿದ್ದರು.

ಬೆಂಗಳೂರು ಡಿವೀಜ್ ಅಸಿಸ್ಟೆಂಟ್ ಕವಿಾಷರ್, ಮೆ॥ ಸಿ. ರಾಮರಾಯರವರು.

ದೊಡ್ಡಬಳ್ಳಾಪುರ ಸಬ್ ಡಿವೀಜ್ ಅಸಿಸ್ಟೆಂಟ್ ಕವಿಾಷರ್, ಮೆ॥ ಟಿ. ಜೊಕ್ಕಣ್ಣನವರು.

ಸ್ಕೂಲ್‌ಗಳ ಡೆಪ್ಯೂಟಿ ಇನ್ಸ್‌ಪೆಕ್ಟರು, ಮೆ॥ ಕೆ. ಎ. ವೀರಭದ್ರಯ್ಯನವರು.

ಗೈರ್ ಹಾಜರು.

ಪ್ರೆಸಿಡೆಂಟರು ಮೆ॥ ಡಿ. ದೇವರಾಜೆ ಅರಸಿನವರು, ಕಾರ್ಯಕಾಹಳ್ಳಿಗೆ ಇತರ ಕೆಲಸದ ಮೇಲೆ ಹೋಗಿದ್ದ ಸಬಬು.

ಕೋಲಾಸಪೇಟೆ ಸಬ್ ಡಿವೀಜ್ ಅಸಿಸ್ಟೆಂಟ್ ಕವಿಾಷರ್, ಮೆ॥ ಸಿ. ದೇವರಾಜೆ ಅರಸಿನವರು, ಕಾರ್ಯಕಾಹಳ್ಳಿಗೆ ಇತರ ಕೆಲಸದ ಮೇಲೆ ಹೋಗಿದ್ದ ಸಬಬು.

ಎಕ್ಸಿಕ್ಯೂಟಿವ್ ಇಂಜನೀಯರು, ಮೆ॥ ಬಿ. ಎಸ್. ವೆಂಕಟಾಚಾರ್ಯರವರು, ಕಾರ್ಯಕಾಹಳ್ಳಿಗೆ ಇತರ ಕೆಲಸದ ಮೇಲೆ ಹೋಗಿದ್ದ ಸಬಬು.

ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್ರವರು, ಮೆ॥ ಜಿ. ಜೇವಿಡ್ಡರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ದೊಡ್ಡಬಳ್ಳಾಪುರ ತಾಲ್ಲೂಕು ಮೆ॥ ಶ್ಯಾನುಭೋಗ ಕರಿಗಿರಿಯಪ್ಪನವರು.

ಹಗನೆಲಮಂಗಲ ತಾಲ್ಲೂಕು ಮೆ॥ ಡಿ. ದಾಸಪ್ಪನವರು.

ಮಾಗಡಿ ತಾಲ್ಲೂಕು ಮೆ॥ ಕೆ. ಕೃಷ್ಣಮೂರ್ತಿರಾಯರು.

ಕೋಲಾಸಪೇಟೆ ಸಬ್ ತಾಲ್ಲೂಕು ಮೆ॥ ಕರೇಭಾವಾ ನರಸಿಹ್ಮಯ್ಯಶೆಟ್ಟರು.